# ಬೆಂಕಿ ಮತ್ತು ಬೆಳಕಿನ ಅನಂತ ಆಲೆಯಾಗಿ ಸಾಹಿತ್ಯ

ಶ್ರೀಧರ ಬಳಗಾರ ಕನ್ನಡದ ವಿಶಿಷ್ಟ ದನಿಯ ಕತೆಗಾರ, ಕಾದಂಬರಿಕಾರ. ಸಹ್ಯಾದ್ರಿಯ ಕಾಡಿನ ಮಡಿಲಿನ ಊರಿನಲ್ಲಿ ನಡೆಯುವ ವಿದ್ಯಮಾನಗಳನ್ನು ಅದರ ನಿಗೂಢತೆ, ಜೀವಂತಿಕೆಗಳಿಂದ ಹಿಡಿಯುವ ಈ ಕತೆಗಾರನ ಕಥನ ಕಳೆದ ಮೂರು ದಶಕಗಳಲ್ಲಿ ತನ್ನದೇ ಓದುಗರನ್ನು ಸೃಷ್ಟಿಸಿಕೊಂಡಿದೆ. ಅವರು ಇದುವರೆಗೆ ಐದು ಕಥಾಸಂಕಲನ (‘ಅಧೋಮುಖ’, ‘ಮುಖಾಂತರ’, ‘ಇಳೆ ಎಂಬ ಕನಸು’, ‘ಒಂದು ಫೋಟೋದ ನೆಗೆಟಿವ್’, ‘ಈಸಾಡತಾವ ಜೀವ’), ಮೂರು ಕಾದಂಬರಿ (‘ಕೇತಕಿಯ ಬನ’, ‘ಆಡುಕಳ’, ‘ಮೃಗಶಿರ’), ಎರಡು ಅಂಕಣ ಬರಹ (‘ರಥ ಬೀದಿ’, ‘ಕಾಲಪಲ್ಲಟ’), ಲೇಖನಗಳ ಸಂಗ್ರಹ (ಮೊಳದಷ್ಟು ಹೂವು) ಪ್ರಕಟಿಸಿದ್ದಾರೆ.

ಶ್ರೀಧರ ಬಳಗಾರರ ‘ಕೃಷಿಕಥನಗಳ ಬಾಗಿಲಲ್ಲಿ’ (ಕಾಲ ಪಲ್ಲಟ) ಎಂಬ ಬರಹವೊಂದರಲ್ಲಿ ನಂದಿಬಯಲಿನ ತಿಮ್ಮಣ್ಣ ಎಂಬುವನು ಎನ್.ಟಿ. ಆಗುತ್ತಾನೆ. ಹಾಗೆಯೇ ಶ್ರೀಧರರ ಮನೆಯಿರುವ ಕುಮಟೆಯ ಎ.ವಿ. ಕಮಲಾ ಬಾಳಿಗ ಕಾಲೇಜಿನ ಎದುರಿನ ವಿರಳ ಮನೆಗಳ ಹೆಬ್ಬಾರಕೇರಿ ಎಂಬ ಊರು ನೋಡನೋಡುತ್ತಿದ್ದಂತೆ ನೂರಾರು ನಿವೇಶನಗಳನ್ನು ಜೋಡಿಸುವ ಹತ್ತಾರು ಅಡ್ಡರಸ್ತೆಗಳ ವಿವೇಕನಗರವಾಗಿ ಬದಲಾಗಿಹೋಗಿದೆ. ಅಲ್ಲಿಂದ ಹತ್ತು ಹೆಜ್ಜೆ ಮುಂದೆ ಬಂದು ಹೆಗಡೆ ಊರಿಗೆ ಹೋಗುವ ರಸ್ತೆ ದಾಟಿದರೆ ಗ್ರಾಮಪಂಚಾಯ್ತಿ ಸುಪರ್ದಿಯ ಕಿರು ಅರಣ್ಯದ ನಡುವಿನ ಹಳಕಾರ ಊರಿನ ರಸ್ತೆ ಸಿಗುತ್ತದೆ. ಬಳಗಾರರ ಕತೆಗಳಲ್ಲಿ ಕಾಣಸಿಗುವ ‘ಹಳದಿ ಸಂಜೆ ನಾಚಿಕೊಂಡ ಹೊತ್ತಿನಲ್ಲಿ’ ಅವರೊಂದಿಗೆ ಹೆಜ್ಜೆಹಾಕುತ್ತ ಈ ಸಂದರ್ಶನ ರೂಪುಗೊಂಡಿತು.

ಅವರ ಕಥಾಜಗತ್ತಿನ ಹರಿಗದ್ದೆ, ಗಂಜಿಗದ್ದೆ, ತೆಂಗುಪಾಲು, ಬೆಳ್ಳಿಪಾಲುನಂತಹ ಊರುಗಳ ಸ್ಥಿತ್ಯಂತರದ ಕಂಪನ ಮತ್ತು ಅದರ ರೂಪ, ರುಚಿ, ಬಣ್ಣ, ವಾಸನೆ, ಲಯದ ಝಳಕೊಂದು ಸಂಜೆಬೆಳಕಿನಲ್ಲಿ ಆದ ನಮ್ಮ ಮುಖಾಮುಖಿಯ ಹೊತ್ತಲ್ಲಿ ಎದುರಿಗೇ ಹಾಜರಿದ್ದಂತಿತ್ತು. ಶ್ರೀಧರರು ಸೃಷ್ಟಿಸಿದ ದೈನಿಕದ ಸಹಜ ಲಯದ ಭಾವಪ್ರಪಂಚ ನಮ್ಮ ಕಾಲದ ಸಂಕಟಗಳಿಗೆ ಮಿಡಿದಿದೆ, ಸಂಭ್ರಮಗಳಿಗೆ ಆಪ್ತವಾಗಿ ಸ್ಪಂದಿಸಿದೆ. ಅಂತಃಕರಣವನ್ನು ತಟ್ಟಿ ಸಂವೇದನೆಯನ್ನು ಹಿಗ್ಗಿಸಿದೆ. ಕತೆಗಳ ಭೌತಿಕ ಪ್ರಪಂಚ ಮತ್ತು ಅಲ್ಲಿಯ ಪಾತ್ರಗಳ ಭಾವಪ್ರಪಂಚಗಳು ಬೇರೆ ಮಾಡಲಾಗದಂತೆ ಒಂದಾಗಿರುವುದು ನಮ್ಮನ್ನು ತಟ್ಟಲು,